CALLING ATTENTION TO MATTERS OF URGENT PUBLIC IMPORTANCE

(i) Bad conditions of tanks in Tiptur Taluk.

SRI V. L. SHIVAPPA.—Sir, I call the attention of the Minister for Transport and Minor Irrigation to the deteriorating condition of tanks in Tiptur Taluk.

SRI M. M. J. SADYOJATHA.—Sir, I wish to make the following statement ತಿಪಟೂರು ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ಸೇರಿದ ೧೪೭ ಕೆರೆಗಳಿವೆ. ಇವುಗಳಿಂದ ಸುಮಾರು ೪೬೫ ಹೆಕ್ಟೇರು ನೀರಾವರಿಯಾಗುತ್ತಿದೆ.

ಇವುಗಳಲ್ಲಿ ೬ ಕೆರೆಗಳು ಮಾತ್ರ ೧೦೦ ಹೆಕ್ಟೇರುಗಳಿಗಿಂತ ಹೆಚ್ಚು ಆಚ್ಚುಕಟ್ಟು ಹೊಂದಿರುತ್ತದೆ, ಅವು ಯಾವುವೆಂದರೆ:—

೧)	ನೊಣವಿನ ಕೆರೆ	೫೪೦–೯೨	ಹೆಕ್ಟೇರುಗಳು.
೨)	ವಿಷ್ಣುಸಂತೆ ಕೆರೆ	೧೨೦–೦೦	,,
೩)	ಈಚನೂರು ಕೆರೆ	೧೧೯–೨೦	,,
೪)	ಕರಡಿ ಕೆರೆ	೧೨೬–೦೨	,,
೫)	ಹಾಲ್ಕುರಿಕೆ ಕೆರೆ	೧೧೨–೮೦	,,
೬)	ಹೊನ್ನವಳ್ಳಿ ಹಿರೇಕೆರೆ	೧೧೮–೮೨	,,

ಈ ಆರು ಕೆರೆಗಳು ಹಳೆಯವಾದರೂ ಒಡೆದು ಹೋಗುವ ಸ್ಥಿತಿಯಲ್ಲಿರುವುದಿಲ್ಲ. ಉಳಿದ ೧೪೧ ಕೆರೆಗಳು ಒಡೆದು ಹೋಗುವ ಸ್ಥಿತಿಯಲ್ಲೇನೂ ಇಲ್ಲ. ಇವುಗಳಲ್ಲಿ ೫೮ ಕೆರೆಗಳ ಏರಿಯ ಎತ್ತರ ಸ್ವಲ್ಪ ಕಡಿಮೆ ಇದೆ. ಇಷ್ಟು ಕೆರೆಗಳಲ್ಲೂ—ಪೈಪಿಂಗ್ ಹೊರತು ನ್ಯೂನತೆಗಳು ಇರುವುದಿಲ್ಲ. ತಿಪಟೂರು ತಾಲ್ಲೂಕಿನಲ್ಲಿ ಸರಾಸರಿ ಮಳೆಯ ಪರಿಮಾಣ ೫೫೦ ಮಿ. ಮಿ.

೧೯೮೦–೮೧ರಲ್ಲಿ ೫೭ ಕೆರೆಗಳ ರಿಪೇರಿ ಕೆಲಸವನ್ನು ತೆಗೆದುಕೊಳ್ಳಲಾಯಿತು. ಅವುಗಳ ಪೈಕಿ ೩೦ ಕೆಲಸಗಳನ್ನು ಪೂರ್ಣಗೊಳಿಸಲಾಯಿತು.

೧೯೮೧–೮೨ರಲ್ಲಿ ಹಿಂದಿನ ವರ್ಷದ ೨೭ ಕೆಲಸಗಳ ಜೊತೆಗೆ ೩೪ ಬೇರೆ ಕೆಲಸಗಳ ರಿಪೇರಿ ಕೆಲಸವನ್ನು ಮಾಡಲಾಗುವುದು. ಹೀಗೆ ವರ್ಷ ವರ್ಷವೂ ಕೆರೆಗಳ ದುರಸ್ಥಿ ಕಾರ್ಯವನ್ನು ಅವಶ್ಯಕತೆ ನೋಡಿಕೊಂಡು ಮಾಡಲಾಗುತ್ತಿದೆ. ಯಾವ ಕೆರೆಗಾದರೂ ಹೆಚ್ಚಿಗೆ ರಿಪೇರಿ ಬೇಕೆನಿಸಿದರೆ, ಆ ಕೆರೆಯ ಕೆಲಸವನ್ನು ಮಾಡಲಾಗುವುದು.

ಕೆರೆಗಳ ಉಸ್ತುವಾರಿಯನ್ನು ನೋಡಿಕೊಳ್ಳಲು ಇಲಾಖೆಯ ವಿವಿಧ ಹಂತದ ಅಧಿಕಾರಿಗಳಿಗೆ ಆದೇಶವನ್ನು ಈಗಾಗಲೇ ಸರ್ಕಾರದಿಂದ ಕೊಡಲ್ಪಟ್ಟಿದೆ.

ತಿಪಟೂರು ತಾಲ್ಲೂಕಿನಲ್ಲಿರುವ ಕೆರೆಗಳಿಗಾಗಿ ವರ್ಷೇ ವರ್ಷೇ ೩–೪ ಲಕ್ಷ ರೂ.ಗಳನ್ನು ಖರ್ಚು ಮಾಡಲಾಗುತ್ತಿದೆ.

ಶ್ರೀ ವಿ. ಎಲ್. ಶಿವಪ್ಪ.—ಅಧ್ಯಕ್ಷರೇ ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ತಿಪಟೂರು ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ಸೇರಿದ ೧೪೭ ಕೆರೆಗಳಿವೆ. ಇವುಗಳಿಂದ ಸುಮಾರು ೪೬೫ ಹೆಕ್ಟೇರು ನೀರಾವರಿಯಾಗುತ್ತಿದೆ ಎಂದು ಹೇಳಿದ್ದಾರೆ. ೧೪೭ರಲ್ಲಿ ೬ನೇ ಇಸವಿಯಿಂದ ಆಚೆಗೆ ಕೆರೆಗಳನ್ನು ಪಾಳೇಗಾರರು ರಾಜ ಮಹಾರಾಜರುಗಳು ಕಟ್ಟಿಸಿದವು. ಅವುಗಳನ್ನು ರಿಪೇರಿ ಮಾಡಿಸಿ ಹೆಚ್ಚು ನೀರಾವರಿ ಆಗಲು ಅನುಕೂಲ ಮಾಡಿಕೊಡಬೇಕು. ಕೆರೆ ಏರಿಗಳನ್ನು ಏರಿಸಿದರೆ ನೀರು ಜಾಸ್ತಿ

ನಿಲ್ಲುತ್ತದೆ. ಕೆರೆಗಳು ಹಳೆಯವಾದರೂ ಒಡೆದು ಹೋಗುವ ಸ್ಥಿತಿಯಲ್ಲಿರುವುದಿಲ್ಲ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ೫೭ ಕೆರೆಗಳನ್ನು ರಿಪೇರಿ ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದೀರಿ, ವರ್ಷ ವರ್ಷ ೩ ಲಕ್ಷ ರೂಪಾಯಿಗಳನ್ನು ಕೊಡುತ್ತೀರಿ. ೩ ಲಕ್ಷ ರೂಪಾಯಿಗಳಲ್ಲಿ ಸುಮಾರು ೧ ಲಕ್ಷ ರೂಪಾಯಿ ಅಲ್ಲಿರುವ ಚೌಡಿ ಇತರೆ ನೌಕರರುಗಳ ಸಂಬಳಕ್ಕೆ ಆಗುತ್ತದೆ. ಇನ್ನು ೨ ಲಕ್ಷ ರೂಪಾಯಿ ಉಳಿಯುತ್ತದೆ, ಆದರಲ್ಲಿ ೧೪೧ ಕೆರೆಗಳ ರಿಪೇರಿ ಕೆಲಸವಾಗಬೇಕು. ಹಣ ಕಡಿಮೆಯಾಗುವುದರಿಂದ ರಿಪೇರಿಯಾಗುವುದಿಲ್ಲ. ಕೆರೆಗಳು ಶಿಥಿಲವಾಗುತ್ತಾ ಬರುತ್ತವೆ, ಸ್ಪೆಷಲ್ ಆಗಿ ಕೆರೆಗಳ ರಿಪೇರಿ ಮಾಡಕೊಡಬೇಕು. ಎರಡನೆಯದಾಗಿ ನಮ್ಮ ತಾಲ್ಲೂಕಿನಲ್ಲಿ ನೀರಾವರಿ ಪ್ರದೇಶ ಬಹಳ ಕಡಿಮೆ ಆದುದರಿಂದ ಸ್ಪೆಷಲ್ ಆಗಿ ಕೆರೆಗಳ ರಿಪೇರಿಗೆ ಹಣವನ್ನು ಒದಗಿಸಬೇಕು.

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಪರಿಶೀಲನೆ ಮಾಡುತ್ತಿದ್ದೇವೆ, ಪ್ರಯಾರಿಟಿ ಮೇಲೆ ಕೆರೆಗಳ ಕೆಲಸವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ವಿ. ಎಲ್. ಶಿವಪ್ಪ.—ತಡಸಲು ಕೆರೆ, ಪರುವಣ್ಣಿಕೆರೆ ಮತ್ತು ಬುರುಡಗಟ್ಟನಕೆರೆಗಳ ರಿಪೇರಿ ಮಾಡಿದರೆ ಸುಮಾರು ೫೦ ಸಾವಿರ ಎಕರೆ ಭೂಮಿ ನೀರಾವರಿಯಾಗುತ್ತದೆ. ಪ್ಲಾನ್‌ನಲ್ಲಿ ಸೇರಿಸದಿದ್ದರೆ ಸ್ಪೆಷಲ್ ಆಗಿ ಸೇರಿಸಿ ರಿಪೇರಿ ಕೆಲಸ ಮಾಡಿಸಿಕೊಡಬೇಕು.

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಪ್ಲಾನ್ ಮತ್ತು ಎಸ್ಟಿಮೇಟ್ ತರಿಸಿ ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಪ್ರಯಾರಿಟಿ ಮೇಲೆ ಕೆರೆಗಳ ಕೆಲಸವನ್ನು ಮಾಡಿಸುತ್ತೇನೆ.

(ii) Re : Accident of a KSRTC bus at Kumbalgud.

SRI D. T. RAMU.—Sir, I wish to call the attention of the Minister for Transport and Minor Irrigation to the accident of a K.S.R.T.C. Bus at Kumbalgud on 8th July 1981 and the indifferent attitude of the crew towards the stranded passengers.

SRI M. M. J. SADHYOJATHAPPA.—Sir,

On 8th July 1981 Shri D. T. Ramu, M.L.A. made a complaint to me against the crew of Bus No. MYF-9624 for their not having picked up passengers from the vehicle MYF-7020 which had broken down. The M.L.A. was one of the passengers of the vehicle which had broken down and which was going from Mandya to Bangalore. This complaint was communicated to the Chief Traffic Manager over the telephone for suitable action. Immediately the Chief Traffic Manager issued instructions to the District Traffic Officer, Bangalore. Bus Station to visit the spot where the vehicle had broken down and ascertain the facts of the incident both from the crew of the vehicle MYF-7020 and the Vehicle No. MYF-9624.

In pursuance of the instructions of the Chief Traffic Manager, the District Traffic Officer, Bangalore Bus Station visited the spot where the vehicle had broken down at about 1930 hours on 8th July 1981 to find out the cause of the break down.